## ರಾಜ್ಯದಲ್ಲಿ ಜಾರಿಯಾಗದ ಶೇ.10 ಮೀಸಲು


# 600 ವೈದ್ಯ ಸೀಟು ಖೋತಾ

■ ಜಯಂತ್ ಗಂಗವಾಡಿ ಬೆಂಗಳೂರು

ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದವರಿಗೆ (ಇಡಬ್ಲ್ಯುಎಸ್) ಈ ವರ್ಷ ಶೇ.10 ಮೀಸಲು ಜಾರಿಗೊಳಿಸಲು ಸಾಧ್ಯವಿಲ್ಲ ಎಂದು ರಾಜ್ಯ ಸರಕಾರ ಕೈಚೆಲ್ಲಿದ ಕಾರಣ, 2019-20ನೇ ಸಾಲಿಗೆ ರಾಜ್ಯಕ್ಕೆ ಸಿಗಬೇಕಿದ್ದ ಒಟ್ಟು 600 ವೈದ್ಯಕೀಯ ಮತ್ತು ದಂತ ವೈದ್ಯಕೀಯ ಸೀಟುಗಳು ಖೋತಾ ಆಗಿವೆ. ಈಗಾಗಲೇ ಎರಡು ಹಂತಗಳಲ್ಲಿ ವೈದ್ಯ ಮತ್ತು ದಂತ ವೈದ್ಯ ಕೋರ್ಸ್‌ಗಳ ಸೀಟು ಹಂಚಿಕೆ ಮುಕ್ತಾಯಗೊಂಡಿದ್ದು, ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದ ಸಾವಿರಾರು ವಿದ್ಯಾರ್ಥಿಗಳು ನಿರಾಸೆಗೊಳಗಾಗಿದ್ದಾರೆ. 》09

**ಇಡಬ್ಲ್ಯುಎಸ್ ವಿದ್ಯಾರ್ಥಿಗಳಿಗೆ ತೀವ್ರ ನಿರಾಸೆ**

### ಕರ್ನಾಟಕಕ್ಕೆ ಹೆಚ್ಚುವರಿ ಸೀಟೂ ಸಿಗಲಿಲ್ಲ



ಕೇಂದ್ರ ಸರಕಾರ ಜಾರಿಗೆ ತಂದಿರುವ ಶೇ.10 ಮೀಸಲು ಅಡಿಯಲ್ಲಿ ರಾಜ್ಯಕ್ಕೆ ಒಟ್ಟು 600 ವೈದ್ಯ ಮತ್ತು ದಂತ ವೈದ್ಯ ಸೀಟುಗಳನ್ನು ಈ ವರ್ಷ ಹೆಚ್ಚುವರಿಯಾಗಿ ನೀಡುವಂತೆ ಮೇನಲ್ಲೇ ಭಾರತೀಯ ವೈದ್ಯಕೀಯ ಮಂಡಳಿಗೆ(ಎಂಸಿಐ) ರಾಜ್ಯ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಮನವಿ ಸಲ್ಲಿಸಿತ್ತು. ಆದರೆ, ರಾಜ್ಯ ಸರಕಾರ ಇಡಬ್ಲ್ಯುಎಸ್ ವರ್ಗಗಳಿಗೆ ಈ ಶೈಕ್ಷಣಿಕ ವರ್ಷ ಶೇ.10ರಷ್ಟು ಮೀಸಲು ಜಾರಿಗೊಳಿಸಲು ಸಾಧ್ಯವಿಲ್ಲ ಎಂದು ಕೈಚೆಲ್ಲಿದ ಹಿನ್ನೆಲೆಯಲ್ಲಿ ರಾಜ್ಯ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮನವಿಯನ್ನು ಎಂಸಿಐ ಪುರಸ್ಕರಿಸಲಿಲ್ಲ. ಹಾಗಾಗಿ, ಈ ವರ್ಷ ರಾಜ್ಯಕ್ಕೆ ಮಾಮೂಲಿಯಂತೆ ಒಟ್ಟು 6,620 ವೈದ್ಯಕೀಯ ಸೀಟುಗಳು ಮತ್ತು 2,674 ದಂತ ವೈದ್ಯ ಸೀಟುಗಳು ಲಭ್ಯವಾಗಿವೆ.

...ಒಟ್ಟ ಪಂಚಮಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

# ಜಾರಿಯಾಗದ 10% ಮೀಸಲು

» ಫ್ಲ್ಯಾಫ್ ಮೊದಲ ಪುಟದಿಂದ

ದೇಶದ ಬಹುತೇಕ ರಾಜ್ಯಗಳು ಕೇಂದ್ರ ಸರಕಾರದ ಈ ಮೀಸಲು ನೀತಿಯನ್ನು ಅನುಷ್ಠಾನಗೊಳಿಸಿವೆ. ಆದರೆ, ಕರ್ನಾಟಕದಲ್ಲಿ ಹಲವು ತಿಂಗಳ ಕಾಲ ಈ ಸೌಲಭ್ಯದ ಅನುಷ್ಠಾನಕ್ಕೆ ಸರಕಾರ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಆನಂತರ, 'ವಿಜಯ ಕರ್ನಾಟಕ' ಪ್ರಕಟಿಸಿದ ವರದಿಯಿಂದ ಎಚ್ಚೆತ್ತುಕೊಂಡ ರಾಜ್ಯ ಸರಕಾರ, 2019ರ ಮೇ 14ರಂದು ಒಕ್ಕಲಿಗ, ವೀರಶೈವ-ಲಿಂಗಾಯತ ಸೇರಿದಂತೆ ರಾಜ್ಯದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ (ಒಬಿಸಿ) ಹಾಗೂ ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಸ್ಥಾನ ಪಡೆಯದ 139 ಜಾತಿಗಳ ಜತೆಗೆ, ರಾಜ್ಯದಲ್ಲಿ ವಾಸವಿರುವ ಬ್ರಾಹ್ಮಣರು, ಆರ್ಯ ವೈಶ್ಯರು, ಜೈನರು, ನಾಯರಗಳು ಹಾಗೂ ಮೊದಲಿಯಾರ್ ಜಾತಿಗಳೂ ಸೇರಿದಂತೆ ಒಟ್ಟು 144 ಜಾತಿಗಳನ್ನು ಇಡಬ್ಲ್ಯುಎಸ್ ಪಟ್ಟಿಗೆ ಸೇರಿಸಿ, ಶೇ.10 ಮೀಸಲು ಕಲ್ಪಿಸುವುದಾಗಿ ಆದೇಶ ಹೊರಡಿಸಿತ್ತು. ಜತೆಗೆ, ಆದಾಯ ಮತ್ತು ಸ್ವತ್ತು ಪ್ರಮಾಣ ಪತ್ರಗಳನ್ನು ನೀಡಲೂ ಅಧಿಕಾರಿಗಳಿಗೆ ಸೂಚಿಸಿತ್ತು.

ಆದರೆ, ರಾಜ್ಯ ಸರಕಾರ ಹೊರಡಿಸಿರುವ ಇಡಬ್ಲ್ಯುಎಸ್ ವರ್ಗಗಳಿಗೆ ಯಾವ ಪ್ರಮಾಣದಲ್ಲಿ ಮೀಸಲು ಹಂಚಿಕೆ ಮಾಡಬೇಕು ಎಂಬ ಗೊಂದಲ ಹಾಗೇ ಮುಂದುವರಿದಿದೆ. ಕೆಲವು ಹಿಂದುಳಿದ ಜಾತಿಗಳು ಶೇ.10 ಮೀಸಲಿನಲ್ಲಿ 'ಒಳಮೀಸಲು' ನೀಡಬೇಕು ಎಂದು ಒತ್ತಾಯಿಸುತ್ತಿವೆ. ಈ ಗೊಂದಲಗಳು ಸರಕಾರಕ್ಕೆ ತಲೆನೋವಾಗಿ ಪರಿಣಮಿಸಿದ್ದು, ನಿವಾರಣೆಗೆ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ.

● ಸರಕಾರದಿಂದ ಯಾವುದೇ ಸೂಚನೆ ಹಾಗೂ ಆದೇಶಗಳು ಬಾರದ ಕಾರಣ ಈ ಬಾರಿ ಶೇ.10 ಮೀಸಲು ಅಡಿಯಲ್ಲಿ ವೈದ್ಯ ಸೀಟುಗಳನ್ನು ಕಲ್ಪಿಸಿಲ್ಲ.

**-ಆರ್. ಗಿರೀಶ್** ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

● ಶೇ.10 ಸೀಟುಗಳನ್ನು ಕಲ್ಪಿಸುವ ಸಂಬಂಧ ಹೆಚ್ಚುವರಿಯಾಗಿ 600 ವೈದ್ಯ ಮತ್ತು ದಂತ ವೈದ್ಯ ಸೀಟುಗಳ ಮಂಜೂರಿಗೆ ಎಂಸಿಐಗೆ ಮನವಿ ಸಲ್ಲಿಸಿದ್ದೆವು. ಆದರೆ, ರಾಜ್ಯ ಈ ಬಾರಿ ಮೀಸಲು ಜಾರಿ ಸಾಧ್ಯವಿಲ್ಲ ಎಂದು ಹೇಳಿದ ಕಾರಣ ಸೀಟುಗಳು ಮಂಜೂರಾಗಲಿಲ್ಲ.

**-ಪಿ.ಜಿ.ಗಿರೀಶ್** ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

2